8. ADDRESS READ BY Mr. GORUR SRINIVASA MURTI.

1st October 1906.

ಶ್ರೀಯುಃಪತಿಸ್ತೆ ಸಹಾಯಃ.

ಕರ್ಣಾಟದೇಶ ಕಮಲಕರ್ಣಿಕಾಯಮಾನ ಶ್ರೀಮನ್ಮಹಿಶೂರಪುರಿ ಮಧ್ಯವಿದ್ಯೋತಮಾನ
ದಿವ್ಯಸಿಂಹಾಸನಾರೂಢ ಶ್ರೀ ಶ್ರೀಕೃಷ್ಣರಾಜ ಸಾರ್ವಭೌಮೇನ ಸಾಚಿವ್ಯಪದೆ ನಿಯು
ಕ್ತಸ್ಯ ಮಾಧವರಾವ್ ಸಿ. ಐ. ಇ. ಆಚ್ಯವೆರ್ಯಸ್ಯ ಚರಣಸನ್ನಿಧೌ.

ಯುಷ್ಮಚ್ಚರಣನಳಿನ ಚಂಚರೀಕಾಯಮಾಣಾಃ ಚಿರಕಾಲಪರಿಚಯಪ್ರಾಪ್ತ ಸಾನುರಾಗಾಃ
ಹಾರ್ಸ ಡಿಸ್ಟ್ರಿಕ್ಟ್ಸ ಪ್ರಜಾಪ್ರತಿನಿಧಯಃ ಸವಿನಯಂ ವಿಜ್ಞಾಪಯಂತಿ ವಿಜ್ಞಾಪನ ಪತ್ರಿಕಾಂ.

ಈ ಸಂಸ್ಥಾನದಲ್ಲಿ ಅನೇಕಾಧಿಕಾರದಿಂದ ಮಹದಧಿಕಾರವಂ ವಹಿಸಿ ಅಮಿತಪ್ರಜಾಕ್ಷೇಮಗಳಿಗೆ ಮುಖ್ಯ ಕಾರಣರೆಂಬುವ
ಬಿರುದಂ ಹೊಂದಿ ಈ ರಾಜ್ಯವಂ ಬಿಟ್ಟು ಟ್ರಾವನ್ಕೂರ್ ದಿವಾನ್ಗಿರಿಯಲ್ಲಿಯೂ ಖ್ಯಾತಿಯನ್ನು ಪಡೆದ ಮತ್ತು ತಮ್ಮ ವಿರಹದಿಂ
ಖೇದಪಟ್ಟು ವರ್ಷಾಕಾಲವಂ ಚಾತಕಪಕ್ಷಿಗಳು ಅಪೇಕ್ಷಿಸುವಂತ ತಮ್ಮ ಆಗಮನ ಸುಖವಂ ಅನುಭವಿಸಬೇಕೆಂದಿದ್ದ ನಮ್ಮಗಳಿಗೆ
ಸಚಿವಪದಾಲಂಕಾರಭೂತರಾದ ಮ" ರಾ" ಲೇಟ್ ದಿವಾನ್ ರಂಗಾಚಾರ್ಯವರ್ಯರಿಂದ ಈ ಸಂಸ್ಥಾನದ ನಿರಂಕುಶ ಪ್ರವರ್ತನಾಧಿಕಾರಿ
ಗಳಿಗೆ ಸಾಂಕುಶ ಪ್ರವರ್ತನವಂ ಬೋಧಿಸಲು ನಿರ್ಮಿತವಾದ ಈ ಪ್ರಜಾ ಪ್ರತಿನಿಧಿಸಭೆಯಲ್ಲಿ ತಾವು ಆಗ್ರಾಸನಾಧಿಪತ್ಯವಂ ವಹಿಸಿ
ಪ್ರತಿನಿಧಿಗಳಿಂದ ವಿಜ್ಞಾಪಿತವಾದ ರೈತರ ಕಷ್ಟಸುಖಗಳಂ ಪ್ರತ್ಯಕ್ಷತಃ ಕೇಳಿ ತನ್ಮೂಲಕ ತಾವು ಮಾಡುವ ನಿವಾರಣೆ, ಹಿತೋಪದೇಶ,
ಇವುಗಳಿಗೆ ಸಾಧಕವಾದ ತಮ್ಮ ಘನವಾದ ಸಂದರ್ಶನ ಈ ದಿವಸ ನಮಗೆ ಲಭಿಸಿದ್ದರಿಂದಲೂ, ತಮ್ಮ ಅವೇಕ್ಷಣವಾದ ಉಪನ್ಯಾ
ಸವು ನಮ್ಮಗಳ ಹೃದಯಕ್ಕೆ ಸುಧಾಧಾರಾಸೇಚನವಾದ್ದರಿಂದಲೂ ಅತ್ಯಂತ ಸಂತೋಷಭರಿತರಾದೆವು.

ಈ ಸಂಸ್ಥಾನದ ಪ್ರಜೆಗಳ ಅಭಿಮತವಂ ದಿವ್ಯದೃಷ್ಟಿಯಿಂದ ತಿಳಿದು ಸ್ವರಾಜ್ಯಪ್ರಜಾ ಕ್ಷೇಮಾಭಿವೃದ್ಧಿಗೆ ಮುಖ್ಯ ಕಾರಣ
ರಾದ ತಮ್ಮನ್ನು ಮಹಿಸೂರು ರಾಜ್ಯದ ಮುಖ್ಯಾಮಾತ್ಯ ಪದವಿಯಲ್ಲಿ ಅಭಿಷಿಕ್ತರನ್ನಾಗಿ ಮಾಡಿದ, ನಮ್ಮನ್ನು ಆಳುತ್ತಿರುವ
ಶ್ರೀಕೃಷ್ಣರಾಜ ಸಾರ್ವಭೌಮರವರ ಚರಣಸನ್ನಿಧಾನದಲ್ಲಿ ನಮ್ಮ ಸಂತೋಷ ಪುರಸ್ಸರವಾದ ಪ್ರಥಮ ಪ್ರಣಾಮಗಳನ್ನು ವಿಜ್ಞಾಪಿ
ಸಲು ಪ್ರಾರ್ಥನೆ ಸ್ವಾಮಿ.

ಈ ಸಂಸ್ಥಾನವು ಬ್ರಿಟಿಷ್ ಗಾರ್ನವೆಂಟಿನವರಿಂದ ಆಳಿದ ಲೇಟ್ ಮಹಾರಾಜ ಶ್ರೀಚಾಮರಾಜೇಂದ್ರ ಒಡೆಯರ್ ಎಹದ್ದೂರ್
ಜಿ. ಸಿ. ಎಸ್. ಐ. ರವರಿಗೆ ಒಪ್ಪಿಸಿದೆ ಯಿಂಚಿಗೆ ದೀರ್ಘಕಾಲ ರಾಜ್ಯಭರವಂ ವಹಿಸಿ ರಾಜ್ಯಕೋಶಾಭಿವೃದ್ಧಿಗೂ ಪ್ರಜೆಗಳ ಸುಖಾಭಿ
ವೃದ್ಧಿಗೂ ಸಾಧಕವಾದ ಅನೇಕ ಬಾಬುಗಳೆಂಬ ಕಲ್ಪಲತೆಗಳು ಮ" ರಾ" ಲೇಟ್ ದಿವಾನ್ ಸರ್. ಕೆ. ಶೇಷಾದ್ರಿಐಯ್ಯರ್ ಕೆ. ಸಿ. ಎಸ್
ಐ. ರವರಿಂದ ಹಾಕಲ್ಪಟ್ಟು ಅದರ ವೃದ್ಧಿಕಾಲದಲ್ಲಿ ಮ" ರಾ" ಲೇಟ್ದಿವಾನ್ ಸರ್. ಪಿ. ಎನ್. ಕೃಷ್ಣಮೂರ್ತಿ ಕೆ. ಸಿ. ಐ. ಇ. ರವರಿಂದ
ಸಂರಕ್ಷಿಸಲ್ಪಟ್ಟು, ಸುಫಲದಾಯಕವಾದ ಕಾಲದಲ್ಲಿ ಪ್ರಜೆಗಳ ಪುಣ್ಯಪರಿಪಾಕವಶಾತ್ ತಮ್ಮ ಕರಗತವಾಗಿರುತ್ತೆ.

" ರಕ್ಷಿತಾ ಸ್ವಸ್ಯ ಧರ್ಮಸ್ಯ, ಸ್ವಜನಸ್ಯಚ ರಕ್ಷಿತಾ " ಎಂಬಂತೆ ಧರ್ಮವನ್ನು ಕಾಪಾಡುವದರಲ್ಲಿ ತಾವು ಪ್ರಥಮಪುರುಷರಾದ್ದ
ರಿಂದ ಸ್ವಧರ್ಮದಿಂ ರಾಜ್ಯಕೋಶವಂ ವೃದ್ಧಿಪಡಿಸುತ್ತಲೂ ಆಯಾಯ ವರ್ಣಾಶ್ರಮ ಧರ್ಮಗಳಂ ಸಮೀಚೀನಮಾರ್ಗದಿಂ ಕಾಪಾಡ
ತ್ತಲೂ ಸ್ವಜನರಕ್ಷಣೆಗೆ ಈ ಸಂಸ್ಥಾನದ ಪ್ರಜೆಗಳಂ ಅತಿಕಾರುಣ್ಯದಿಂದ ಸಂರಕ್ಷಣೆ ಮಾಡುತ್ತಾ ಇತೋಪ್ಯತಿಶಯವಾದ ಕೀರ್ತಿ
ಯಂ ಪಡೆಯಬೇಕೆಂದು ಪ್ರಾರ್ಥಿಸುತ್ತೇನೆ.

" ಮಧುರ್ಭ್ಯ—ಮಾಧವಭ್ಯ ವಾಸಂತಿಕಾಭ್ಯತೂ " ಎಂಬಂತೆ ಮಾಧವನೂ ವಸಂತರ್ತುವೂ ಸಹ ಹ್ಯಾಗೆ ಚೇತನಾಚೇತನ
ಪದಾರ್ಥಗಳಿಗೆ ಸಂತೋಷಕರವಾದ್ದೋ ತನ್ನಾಮಾಂಕಿತರಾದ ತಾವೂ ಈ ಸಭೆಯಲ್ಲಿ ಪ್ರಜೆಗಳ ಕ್ಷೇಮಾಭಿವೃದ್ಧಿಗೆ ಸಹಾಯಕ
ರಾದ ಉಪಸಚಿವರೊಡಗೂಡಿ ಪ್ರಜೆಗಳ ಕಷ್ಟಸುಖವಂ ವಿಚಾರಮಾಡುತ್ತ ದಿಗಂತವಿಶ್ರಾಂತವಾದ ಕೀರ್ತಿಯಿಂದ ಈ ಸಂಸ್ಥಾನದ
ಪ್ರಜೆಗಳಿಗೆ ಉಂಟಾಗುವ ಸಂತೋಷಾತಿಶಯದಿಂ ಪರಮಾತ್ಮಸನ್ನಿಧಾನದಲ್ಲಿ ಮಾಡತಕ್ಕ ಶ್ರೇಯಃಪ್ರಾರ್ಥನೆಯಿಂದ ಶ್ರೀಮನ್ಮಹಾ
ರಾಜಾ ಶ್ರೀಕೃಷ್ಣರಾಜಸಾರ್ವಭೌಮರವರು ಸತ್ಸಂತಾನಸಂಪತ್ಸಮೃದ್ಧಿಯಿಂದ ಚಿರಕಾಲರಾಜ್ಯಪರಿಪಾಲನೆಯಂ ಸುಖದಿಂಗೈಯು
ತ್ತಿರಬೇಕೆಂತಲೂ, ತಾವೂ ಉಪಸಚಿವರೊಡನೆ ಚಿರಕಾಲ ಮುಖ್ಯಾಮಾತ್ಯಪದವಿಯಂ ಅಲಂಕರಿಸಬೇಕೆಂತಲೂ ಸವಿನಯದಿಂ ಸಭೆ
ಯದಿಂ ಸಾದರದಿಂ ವಿಜ್ಞಾಪಿಸುತ್ತೇವೆ ಸ್ವಾಮಿ.

ಇತಿ ವಿಜ್ಞಾಪಯಂತಿ, ಹಾಸನ ಡಿಸ್ಟ್ರಿಕ್ಟ್ ಪ್ರಜಾಪ್ರತಿ ನಿಧಯಃ.